ದಿನಾಂಕಃ 27-11-2025 ರಂದು ಆದ ಆದೇಶದ ಮೇರೆಗೆ ದಿನಾಂಕಃ 30-12-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್ ವಕೀಲರಿಂದ:-

10. ನಾನು ಮತ್ತು ಫ್ರಾಸಾ. 2 ರವರು ಚಿಕ್ಕಂದಿನಿಂದ ಒಟ್ಟಿಗೆ ವಿದ್ಯಾಭ್ಯಾಸ ಮಾಡಿದ್ದೇವೆ ಮತ್ತು ಒಂದೇ ಊರಿನವರು. ನಮ್ಮ ಮನೆಯಿಂದ ಫ್ರಾಸಾ.2 ರವರ ಮನೆಗೆ ಸುಮಾರು ಅರ್ಧ ಕಿ.ಮೀ. ದೂರವಾಗುತ್ತದೆ. ನಾನು ಮದುಗುಣಿ ಗ್ರಾಮದ ಸೀಕೆಯಲ್ಲಿ ವಾಸವಾಗಿದ್ದೇನೆ. ನಮ್ಮ ಮನೆಯಿಂದ ಸುಮಾರು 5 ರಿಂದ 10 ನಿಮಿಷಕ್ಕೆ ಫ್ರಾಸಾ.2 ರವರ ಮನೆಗೆ ಹೋಗಬಹುದು.

11. ಫ್ರಾಸಾ.2 ರವರು ಫೋನ್ ಮಾಡಿದಾಗ ನನಗೆ ಘಟನೆಯ ಬಗ್ಗೆ ತಿಳಿಯಿತು. ಫ್ರಾಸಾ.2 ರವರು ಫೋನ್ ಮಾಡಿದಾಗ ಸಮಯ ಮಧ್ಯಾಹ್ಮ 3.45 ರಿಂದ 4 ಗಂಟೆ ಆಗಿರಬಹುದು. ನನಗೆ ಫೋನ್ ಮಾಡಿದಾಗ ಫ್ರಾಸಾ.2 ರವರು ತಮ್ಮ ಮನೆಯಲ್ಲೇ ಇದ್ದರು. ಅವರು ಫೋನ್ ಮಾಡಿದಾಗ ನಿಮಗೆ ಏನು ಹೇಳಿದರು ಎಂದರೆ ಸಾಕ್ಷಿ ಆರೋಪಿ ರವಿರವರಿಗೆ ಹೊಡೆದಿದ್ದಾರೆ ಬಾ ಎಂದು ತಿಳಿಸಿದರು ಎನ್ನುತ್ತಾರೆ. ನೀವು ಫ್ರಾಸಾ.2 ರವರ ಮನೆಯ ಹತ್ತಿರ ಹೋದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಸಂಜೆ 4 ಗಂಟೆ ಸುಮಾರಿಗೆ ನಾನು ಅಲ್ಲಿಗೆ ಹೋಗಿದ್ದೆನು ಎನ್ನುತ್ತಾರೆ. ಆಗ ಅಲ್ಲಿ 4 ರಿಂದ 5 ಜನರು ಸೇರಿದ್ದರು. ಅವರ ಹೆಸರನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಅವರು ಎಲ್ಲಿದ್ದರು ಎಂದರೆ ಸಾಕ್ಷಿ ಘಟನಾ ಸ್ಥಳದಲ್ಲಿ ಇದ್ದರು ಎನ್ನುತ್ತಾರೆ. ನಾನು ಅಲ್ಲಿಗೆ ಹೋದಾಗ ಫ್ರಾಸಾ.1 ಮತ್ತು 2 ರವರು ಅವರ ಮನೆಯ ಗೇಟಿನ ಬಳಿ ಇದ್ದರು. ಆರೋಪಿ ಶೆಡ್ ನ ಹತ್ತಿರ ನಿಂತಿದ್ದನು. ಘಟನಾ ಸ್ಥಳದಿಂದ

ಸದರಿ ಶೆಡ್‌ಗೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿ ಸುಮಾರು 100 ಮೀಟರ್ ದೂರವಾಗುತ್ತದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಫ್ರಾಸಾ.1 ರವರ ಮನೆಯ ಹತ್ತಿರವೇ ಶೆಡ್ ಇದೆ ಎನ್ನುತ್ತಾರೆ. ಆ ಸಮಯದಲ್ಲಿ ನೀವು ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

12. ನೀವು ಎಷ್ಟು ಗಂಟೆಯವರೆಗೆ ಸ್ಥಳದಲ್ಲಿ ಇದ್ದೀರಿ ಎಂದರೆ ಸಾಕ್ಷಿ ಅರ್ಧ ಗಂಟೆಯವರೆಗೆ ಇದ್ದೆನು ಎನ್ನುತ್ತಾರೆ. ನೀವು ಅಲ್ಲಿ ಇರುವಷ್ಟು ಕಾಲ ಆರೋಪಿ ಅಲ್ಲಿಯೇ ಇದ್ದನೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಂಜೆ 4.30 ಗಂಟೆಗೆ ಸುಮಾರಿಗೆ ರವಿರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನೀವು ಆಸ್ಪತ್ರೆಗೆ ಹೋದಿರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ರವಿರವರನ್ನು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎಂದರೆ ಸಾಕ್ಷಿ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಎನ್ನುತ್ತಾರೆ.

13. ನಾನು ಸ್ಥಳಕ್ಕೆ ಹೋಗುವ ಮೊದಲೇ ಘಟನೆ ನಡೆದಿತ್ತು. ಆರೋಪಿಯ ಕೈಯಲ್ಲಿ ಗುದ್ದಲಿ ಇತ್ತು ಎಂದು ಹೇಳಿದ್ದೀರಿ ಅದರ ಹಿಡಿ ಎಂತದು ಎಂದರೆ ಸಾಕ್ಷಿ ಮರದ ಹಿಡಿ ಎನ್ನುತ್ತಾರೆ. ನೀವು ರವಿರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಪೂರ್ವದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸ್ಥಳದಲ್ಲಿ ನೀವು ಫ್ರಾಸಾ.1 ಮತ್ತು 2 ರವರನ್ನು ಕುರಿತು ಏನಾಯಿತು ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ರವಿರವರಿಗೆ ಆರೋಪಿ ಹೊಡೆದಿದ್ದಾಗಿ ಗೊತ್ತಾಯಿತು, ಆದರೆ ಆ ಕುರಿತು ಸ್ಥಳದಲ್ಲಿ ಫ್ರಾಸಾ.1 ಮತ್ತು 2 ರವರನ್ನು ಏನಾಯಿತು, ಹೇಗಾಯಿತು ಎಂದು ವಿಚಾರಿಸಲಿಲ್ಲ ಎನ್ನುತ್ತಾರೆ. ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಹೋದಾಗ ಸಮಯ ಸಂಜೆ 5 ಗಂಟೆಯಾಗಿತ್ತು. ನೀವು

ಅಲ್ಲಿಗೆ ಹೋಗುವಷ್ಟರಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಅಲ್ಲಿಗೆ ಹೋದ ಬಳಿಕ ಪೊಲೀಸರಿಗೆ ದೂರನ್ನು ಕೊಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಂಜೆ 7 ಗಂಟೆಯಿಂದ 7.30 ಗಂಟೆಯವರೆಗೆ ನಾವು ಬಾಳೆಹೊನ್ನೂರು ಆಸ್ಪತ್ರೆಯಲ್ಲಿದ್ದೆವು. ಆ ಸಮಯದಲ್ಲಿ ಪೊಲೀಸರು ಅಲ್ಲಿಗೆ ಬಂದಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

14. ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಹೋದಾಗ ಸಮಯ ರಾತ್ರಿ 9 ಗಂಟೆಯಾಗಿತ್ತು. ರಾತ್ರಿ 11 ಗಂಟೆಯವರೆಗೆ ನಾನು ಅಲ್ಲೇ ಇದ್ದೆನು. ನಂತರ ಎಲ್ಲಿಗೆ ಹೋದಿರಿ ಎಂದರೆ ಸಾಕ್ಷಿ ರವಿರವರ ಶವವನ್ನು ವಾಪಸ್ ತೆಗೆದುಕೊಂಡು ಬಂದೆವು ಎನ್ನುತ್ತಾರೆ. ಶವವನ್ನು ಎಲ್ಲಿಗೆ ತೆಗೆದುಕೊಂಡು ಹೋದಿರಿ ಎಂದರೆ ಸಾಕ್ಷಿ ಅವರ ಮನೆಗೆ ಎನ್ನುತ್ತಾರೆ. ಅಲ್ಲಿಗೆ ಬಂದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಮಧ್ಯರಾತ್ರಿ 12 ರಿಂದ 1 ಗಂಟೆಯಾಗಿತ್ತು ಎನ್ನುತ್ತಾರೆ. ನೀವು ಇದ್ದ ಸಮಯದಲ್ಲಿ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಬಾಳೆಹೊನ್ನೂರು ಪೊಲೀಸರು ಬಂದಿದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅವರು ಯಾರು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಲ್ಲಿ ಪೊಲೀಸರು ನಿಮ್ಮನ್ನು ವಿಚಾರಿಸಿ ನಿಮ್ಮ ಸಹಿಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆಸ್ಪತ್ರೆಯಿಂದ ರವಿರವರ ಮನೆಯ ಹತ್ತಿರ ಮಧ್ಯರಾತ್ರಿ ಬಂದಾಗ ಪೊಲೀಸರು ಇದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

15. ಮಾರನೆ ದಿನ ಪೊಲೀಸರು ನಿಮ್ಮನ್ನು ವಿಚಾರಣೆಗೆ ಕರೆದಿದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎಷ್ಟು ಗಂಟೆಗೆ ಎಂದರೆ ಸಾಕ್ಷಿ ಬೆಳಿಗ್ಗೆ 8 ಗಂಟೆಗೆ ಎನ್ನುತ್ತಾರೆ. ಬೆಳಿಗ್ಗೆ 8 ಗಂಟೆ ಸುಮಾರಿಗೆ ಪೊಲೀಸರು ಸ್ಥಳಕ್ಕೆ ಬಂದು ನನಗೆ ಫೋನ್ ಮಾಡಿ ಕರೆದರು. ಆ ಸಮಯದಲ್ಲಿ ನಾನು ನಮ್ಮ

ಮನೆಯಲ್ಲಿದ್ದೆನು, ಅಲ್ಲಿಂದ ಸೀದಾ ಪ್ರಾಸಾ.2 ರವರ ಮನೆಯ ಹತ್ತಿರ ಹೋದೆನು. ನೀವು ಅಲ್ಲಿಗೆ ಹೋದಾಗ ಶವ ಇತ್ತೆ ಎಂದರೆ ಸಾಕ್ಷಿ ಇರಲಿಲ್ಲ, ರಾತ್ರಿ 1 ಗಂಟೆ ಸುಮಾರಿಗೆ ಶವಸಂಸ್ಕಾರ ಮಾಡಲಾಗಿತ್ತು ಎನ್ನುತ್ತಾರೆ.

16. ಪ್ರಾಸಾ.2 ರವರ ಮನೆಗೆ ಹೋದ ಕೂಡಲೇ ಪೊಲೀಸರು ನಿಮ್ಮ ಸಹಿಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಒಟ್ಟು ಎಷ್ಟು ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿ ಮೊದಲಿಗೆ ಪೊಲೀಸರು ನೋಟೀಸನ್ನು ಕೊಟ್ಟರು ಎನ್ನುತ್ತಾರೆ. ಎಷ್ಟು ಸಹಿಯನ್ನು ಪಡೆದುಕೊಂಡರು ಎಂದು ಪುನಃ ಕೇಳಿದಾಗ ಸಾಕ್ಷಿ ಒಟ್ಟು 4 ರಿಂದ 5 ಸಹಿಗಳನ್ನು ಪಡೆದುಕೊಂಡರು ಎನ್ನುತ್ತಾರೆ. ನಿಮ್ಮ ಸಹಿಗಳನ್ನು ಪಡೆದುಕೊಂಡ ದಾಖಲೆಯಲ್ಲಿ ಒಟ್ಟು ಎಷ್ಟು ಪುಟಗಳಿದ್ದವು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವ ಯಾವ ಪುಟದಲ್ಲಿ ಎಷ್ಟು ಸಹಿಗಳನ್ನು ಮಾಡಿದ್ದೀರಿ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ 2 ವರ್ಷಗಳು ಕಳೆದಿದೆ, ಹಾಗಾಗಿ ನೆನಪಿಲ್ಲ ಎನ್ನುತ್ತಾರೆ. ಯಾವ ಯಾವ ಪುಟದಲ್ಲಿ ಏನು ಬರೆದಿತ್ತು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಒಂದು ಪುಟದಲ್ಲಿ ಸ್ಥಳದ ಸ್ಕೆಚ್ ಇತ್ತು, ಅದಕ್ಕೆ ಸಹಿಯನ್ನು ಪಡೆಯಲಾಗಿದೆ ಎನ್ನುತ್ತಾರೆ. ಉಳಿದ ಪುಟಗಳಲ್ಲಿ ಏನು ಬರೆದಿತ್ತು ಎಂದರೆ ಸಾಕ್ಷಿ ಅದನ್ನು ಬರೆದಾಗ ನಾನು ಓದಿದ್ದೆನು, ಆದರೆ ಈಗ ನನಗೆ ನೆನಪಿಲ್ಲ. ಸ್ಕೆಚ್ ನ್ನು ಹೊರತುಪಡಿಸಿ ಉಳಿದ ಸಹಿಗಳನ್ನು ಯಾವ ಪುಟಕ್ಕೆ ಮಾಡಿದ್ದೀರಿ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ.

17. ಸಹಿ ಮಾಡಿದ ನಂತರ ಬೆಳಿಗ್ಗೆ ಸುಮಾರು 9.30 ರಿಂದ 10 ಗಂಟೆಗೆ ಮನೆಗೆ ವಾಪಸ್ ಹೋದೆನು. ನೀವಾಗೇ ಹೇಳಿ ಬರೆಸಿದ್ದಕ್ಕೆ ಪೊಲೀಸರು ಸಹಿ ಪಡೆದುಕೊಂಡಿದ್ದಾರೆಯೇ ಎಂದರೆ ಸಾಕ್ಷಿ ನಾನು

ಸ್ಥಳವನ್ನು ತೋರಿಸಿದ್ದನ್ನು ಬರೆದುಕೊಂಡಿದ್ದಾರೆ, ರಕ್ತದ ಕಲೆಗಳನ್ನು ಮತ್ತು ಪುಡಿಗಳನ್ನು ತೆಗೆದುಕೊಂಡ ಬಗ್ಗೆ ಬರೆದಿದ್ದಾರೆ, ಗುದ್ದಲಿ ಬಗ್ಗೆ ಬರೆದುಕೊಂಡಿದ್ದಾರೆ ಎನ್ನುತ್ತಾರೆ. ಆ ರೀತಿ ಬರೆದುಕೊಂಡಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ಬೆಳಿಗ್ಗೆ 8.45 ರಿಂದ 9 ಗಂಟೆಯಾಗಿತ್ತು ಎನ್ನುತ್ತಾರೆ. ಆ ಸಮಯದಲ್ಲಿ ಎಷ್ಟು ಜನರು ಸೇರಿದ್ದರು ಎಂದರೆ ಸಾಕ್ಷಿ ನಾನು, ಫ್ರಾಸಾ.1, ಫ್ರಾಸಾ.2, ಚಾಸಾ.8 ಮತ್ತು ಪೊಲೀಸರು ಇದ್ದೆವು, ಬೇರೆ ಯಾರು ಇರಲಿಲ್ಲ ಎನ್ನುತ್ತಾರೆ.

18. ಫ್ರಾಸಾ.1 ರವರ ಮನೆಯ ಮುಂದೆ ರಸ್ತೆ ಇದೆ ಎಂದು ಹೇಳಿದ್ದೀರಿ ಅದು ಬಾಳೆಹೊನ್ನೂರು-ಎನ್.ಆರ್.ಪುರ ಮುಖ್ಯ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ದಿನದ 24 ಗಂಟೆ ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಹಗಲು ಸಮಯದಲ್ಲಿ ಅಲ್ಲಿ ಜನರ ಓಡಾಟ ಸಹ ಇರುತ್ತದೆ ಎಂದರೆ ಸರಿ. ಫ್ರಾಸಾ.1 ರವರ ಮನೆಯ ಅಕ್ಕಪಕ್ಕದಲ್ಲಿ ವಾಸದ ಮನೆಗಳಿವೆ ಎಂದರೆ ಸರಿ. ಅವರ ಮನೆಯ ಎದುರಿಗೆ ಅಂಗಡಿ ಮಳಿಗೆಗಳು, ವಾಸದ ಮನೆಗಳು ಇವೆ ಎಂದರೆ ಸರಿ.

19. ಟಾರ್ ರಸ್ತೆಯ ಮೇಲಿದ್ದ ಒಣಗಿದ ರಕ್ತದ ಕಲೆಗಳನ್ನು ಪೊಲೀಸರು ತೆಗೆದುಕೊಂಡರು. ಅದು ಯಾವ ಬಣ್ಣದಾಗಿತ್ತು ಎಂದರೆ ಸಾಕ್ಷಿ ಕಪ್ಪು ಬಣ್ಣದಾಗಿತ್ತು ಎನ್ನುತ್ತಾರೆ. ಆ ಸ್ಥಳದಲ್ಲಿ ರಸ್ತೆ ಚೆನ್ನಾಗಿತ್ತೇ ಅಥವಾ ಗುಂಡಿ ಬಿದ್ದಿತ್ತೇ ಎಂದರೆ ಸಾಕ್ಷಿ ಚೆನ್ನಾಗಿತ್ತು ಎನ್ನುತ್ತಾರೆ. ಪೊಲೀಸರು ಡಾಂಬರನ್ನು ಕೆರೆದು ತೆಗೆದುಕೊಂಡರೇ ಅಥವಾ ಕೇವಲ ರಕ್ತದ ಕಲೆಗಳನ್ನಷ್ಟೇ ಸಂಗ್ರಹಿಸಿದರೇ ಎಂದರೆ ಸಾಕ್ಷಿ ನಾನು ಗಮನಿಸಿಲ್ಲ ಎನ್ನುತ್ತಾರೆ. ರಕ್ತದ ಕಲೆಯಿದ್ದ ಸ್ಥಳದ ಫೋಟೋಗಳನ್ನು ಪೊಲೀಸರು ತೆಗೆದುಕೊಂಡರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ರಕ್ತದ ಕಲೆಯನ್ನು ಸಂಗ್ರಹಿಸಿದಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿಲ್ಲ,

ಆದರೆ ಬೆಳಿಗ್ಗೆ 8.30 ರಿಂದ 8.45 ಗಂಟೆಯಾಗಿತ್ತು ಎನ್ನುತ್ತಾರೆ. ರಕ್ತ ಮಿಶ್ರಿತ ಪುಡಿ ಎಷ್ಟಿತ್ತು ಎಂದರೆ ಸಾಕ್ಷಿ ಸ್ವಲ್ಪ ಇತ್ತು, ಅದನ್ನು ಒಂದು ಪ್ಯಾಕೇಟಿನಲ್ಲಿ ತೆಗೆದುಕೊಂಡರು ಎನ್ನುತ್ತಾರೆ. ನಿಮಗೆ ಡಾಂಬರ್ ಮೇಲೆ ರಕ್ತ ಕಂಡುಬಂತ್ತೇ ಎಂದರೆ ಸಾಕ್ಷಿ ಒಣಗಿದ ರಕ್ತ ಕಂಡುಬಂತು ಎನ್ನುತ್ತಾರೆ. ರಕ್ತ ಕೆಂಪಾಗಿರುವಂತೆ ಕಂಡುಬಂತ್ತೇ ಎಂದರೆ ಸಾಕ್ಷಿ ಇಲ್ಲ, ಆದರೆ ಅದು ಒಣಗಿತ್ತು, ಕಪ್ಪಾಗಿತ್ತು ಎನ್ನುತ್ತಾರೆ.

20. ಗುದ್ದಲಿಯ ಹಿಡಿ ಸುಮಾರು 2 ರಿಂದ 3 ಅಡಿ ಉದ್ದ ಇತ್ತು. ಸಾಮಾನ್ಯವಾಗಿ ಮಲೆನಾಡು ಪ್ರದೇಶದಲ್ಲಿ ಕೃಷಿ ಮತ್ತು ಗಾರೆ ಕೆಲಸಕ್ಕೆ ಗುದ್ದಲಿ, ಹಾರೆ, ಕೊಡಲಿಗಳನ್ನು ಬಳಸಲಾಗುತ್ತದೆ ಎಂದರೆ ಸರಿ. ನಮಗೆ ಸೇರಿದ ಜಮೀನು ಇದೆ. ಹಾರೆ ಮತ್ತು ಗುದ್ದಲಿ ಬೇರೆ ಬೇರೆ ಆಯುಧಗಳು ಎಂದರೆ ಸರಿ. ಮು.ಮಾ.2 ಗುದ್ದಲಿಯನ್ನು ತೋರಿಸಿ ಅದರ ಹಿಡಿಯ ಉದ್ದ ಸುಮಾರು 4 ರಿಂದ 5 ಅಡಿ ಇದೆ ಎಂದು ಕೇಳಲಾಗಿ ಸಾಕ್ಷಿ ನಾನು ಅಂದಾಜಿನ ಮೇರೆಗೆ ಹೇಳಿದ್ದೇನೆ ಎನ್ನುತ್ತಾರೆ. ಮಲೆನಾಡಿನ ಕಡೆ ಸದರಿ ಆಯುಧವನ್ನು ಹಾರೆ ಎನ್ನುತ್ತಾರೆ ಎಂದರೆ ಸರಿ. ಮು.ಮಾ.2 ರ ಮೇಲೆ ಎಲ್ಲಿಯೂ ಸಹ ರಕ್ತದ ಕುರುಹುಗಳು ಇರುವುದು ಕಂಡುಬರುವುದಿಲ್ಲ ಎಂದರೆ ಸರಿ.

21. ಶೆಡ್ ನ ಹೊರಭಾಗದಲ್ಲಿ ಸದರಿ ಗುದ್ದಲಿ ಇತ್ತು. ಶೆಡ್ ನಿಂದ ಎಷ್ಟು ದೂರದಲ್ಲಿ ಗುದ್ದಲಿ ಇತ್ತು ಎಂದರೆ ಸಾಕ್ಷಿ ಸುಮಾರು 10 ಅಡಿ ದೂರದಲ್ಲಿ ಎನ್ನುತ್ತಾರೆ. ಗುದ್ದಲಿ ಇದ್ದ ಸ್ಥಳದ ಫೋಟೋವನ್ನು ಪೊಲೀಸರು ತೆಗೆದುಕೊಂಡರೆ ಎಂದರೆ ಸಾಕ್ಷಿ ಫೋಟೋಗಳನ್ನು ತೆಗೆದುಕೊಳ್ಳುತ್ತಿದ್ದರು ಆದರೆ ನಾನು ನೋಡಿಲ್ಲ ಎನ್ನುತ್ತಾರೆ. ಶೆಡ್ ನ ಒಳಗಡೆ ಪೊಲೀಸರು ಏನನ್ನಾದರೂ ತೆಗೆದುಕೊಂಡರೇ ಎಂದರೆ ಸಾಕ್ಷಿ ಮೇಲೆ ಹೇಳಿದ ಗುದ್ದಲಿಯನ್ನು ತೆಗೆದುಕೊಂಡರು ಎನ್ನುತ್ತಾರೆ. ಸಾಕ್ಷಿ

ಮುಂದುವರೆದು ಅದನ್ನು ಫ್ರಾಸಾ.1 ರವರು ಹಾಜರುಪಡಿಸಿದರು ಎನ್ನುತ್ತಾರೆ. ಶೆಡ್ ನ ಪಕ್ಕದಲ್ಲಿದ್ದ ಗುದ್ದಲಿಯನ್ನು ಫ್ರಾಸಾ.1 ರವರು ತೆಗೆದು ಪೊಲೀಸರಿಗೆ ಕೊಟ್ಟರು. ಗುದ್ದಲಿ ಇದ್ದ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಫೋಟೋವನ್ನು ತೆಗೆದುಕೊಂಡಿದ್ದರು ಎನ್ನುತ್ತಾರೆ. ಅಲ್ಲಿ ನಿಮ್ಮ ಸಹಿಯನ್ನು ಪಡೆದುಕೊಂಡಿದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಗುದ್ದಲಿಯನ್ನು ತೆಗೆದುಕೊಂಡಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿಲ್ಲ ಆದರೆ ಬೆಳಿಗ್ಗೆ 8.30 ರಿಂದ 8.45 ಗಂಟೆಯಾಗಿತ್ತು ಎನ್ನುತ್ತಾರೆ.

22. ಮಹಜರ್ ಜರುಗಿಸಿದ ಒಂದು ವಾರದ ಬಳಿಕ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು. ಅದರ ಪೂರ್ವದಲ್ಲಿ ನೀವು ಠಾಣೆಗೆ ಹೋಗಿರಲಿಲ್ಲವೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ರಕ್ತದ ಕಲೆಗಳು ಇರುವಂತಹ ಪುಡಿ ಎಂದು ನಿಮ್ಮ ಸಮಕ್ಷಮ ಬರವಣಿಗೆ ಮಾಡಿದ್ದಾರೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಶೆಡ್ ನ ಸ್ವಲ್ಪ ಹಿಂಭಾಗದಲ್ಲಿ ಫ್ರಾಸಾ.1 ರವರ ಮನೆ ಇದೆ. ಶೆಡ್ ನಿಂದ ಅವರ ಮನೆಗೆ 10 ಅಡಿ ದೂರವಿದೆ. ಫ್ರಾಸಾ.1 ರವರ ಮನೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿ ಸುಮಾರು 100 ಮೀಟರ್ ಇರಬಹುದು ಎನ್ನುತ್ತಾರೆ. ಫ್ರಾಸಾ.1 ರವರ ಮನೆಯಿಂದ ಅವರ ಮನೆ ಮುಂದೆ ಇರುವ ಟಾರ್ ರಸ್ತೆಗೆ ಅಂದಾಜು 50 ಮೀಟರ್ ದೂರವಾಗಬಹುದು.

ಪ್ರಶ್ನೆಃ ಶೆಡ್ ಎಷ್ಟು ಅಡಿ ಅಗಲವಿತ್ತು?

ಉತ್ತರಃ ಅಳತೆ ಮಾಡಿಲ್ಲ.

ಪ್ರಶ್ನೆಃ ಪೊಲೀಸರು ಅಳತೆ ಮಾಡಿ ಬರೆದುಕೊಂಡರೆ?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ ಕೃತ್ಯ ನಡೆದ ಸ್ಥಳದ ಚಕ್ಕುಬಂದಿಯನ್ನು ಹೇಳಲಾಗುತ್ತದೆಯೇ?

ಉತ್ತರಃ ಹೌದು

ಪ್ರಶ್ನೆಃ ಪೂರ್ವ ದಿಕ್ಕಿಗೆ ಏನಿದೆ?

ಉತ್ತರಃ ಬೌತಿಸ್ ರವರ ಅಂಗಡಿ.

ಪ್ರಶ್ನೆಃ ಪಶ್ಚಿಮ ದಿಕ್ಕಿಗೆ ಏನಿದೆ?

ಉತ್ತರಃ ಮೃತ ರವಿರವರಿಗೆ ಸೇರಿದ ಜಾಗ.

ಪ್ರಶ್ನೆಃ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಏನಿದೆ?

ಉತ್ತರಃ ಎರಡು ಕಡೆ ರಸ್ತೆ ಇವೆ.

ಪ್ರಶ್ನೆಃ ಶೆಡ್‌ನ ಚಕ್ಕುಬಂದಿಯನ್ನು ಹೇಳಲಾಗುತ್ತದೆಯೇ?

ಉತ್ತರಃ ಪೂರ್ವಕ್ಕೆ ಬೌತಿಸ್ ರವರ ಅಂಗಡಿ, ಪಶ್ಚಿಮಕ್ಕೆ ಮೃತ ರವಿರವರಿಗೆ ಸೇರಿದ ಜಾಗ ಇದೆ .

ಪ್ರಶ್ನೆಃ ಒಂದು ವಾರದ ನಂತರ ಪೊಲೀಸ್ ಠಾಣೆಗೆ ಹೋಗಿದ್ದಾಗಿ ಹೇಳಿದ್ದೀರಿ ಆಗ ಸಮಯ ಎಷ್ಟಾಗಿತ್ತು?

ಉತ್ತರಃ ಸಂಜೆ 5 ರಿಂದ 6 ಗಂಟೆ.

ಪ್ರಶ್ನೆಃ ಆಗ ಠಾಣೆಯಲ್ಲಿ ಎಷ್ಟು ಜನರಿದ್ದರು?

ಉತ್ತರಃ ಆರೋಪಿ ಮತ್ತು ಪೊಲೀಸ್ ಸಿಬ್ಬಂದಿ ಇದ್ದರು. ನಾನು ಮತ್ತು ಪ್ರಾಸಾ.3 ರಚನ್ ರವರು ಹೋಗಿದ್ದೆವು.

ಪ್ರಶ್ನೆಃ ಆರೋಪಿಯನ್ನು ಎಲ್ಲಿ ಕೂರಿಸಲಾಗಿತ್ತು?

ಉತ್ತರಃ ಬಾಳೆಹೊನ್ನೂರು ಪೊಲೀಸ್ ಠಾಣೆಯ ಮೊದಲನೆ ಮಹಡಿಯ ಕೋಣೆಯಲ್ಲಿ ಕೂರಿಸಲಾಗಿತ್ತು.

ಪ್ರಶ್ನೆಃ ಆಗ ಆರೋಪಿಗೆ ಬೇಡಿ ತೊಡಿಸಲಾಗಿತ್ತೆ?

ಉತ್ತರಃ ನಾನು ನೋಡಿಲ್ಲ.

ಪ್ರಶ್ನೆಃ ಠಾಣೆಗೆ ಹೋದ ಕೂಡಲೇ ಸಹಿ ಪಡೆದುಕೊಂಡರೆ?

ಉತ್ತರಃ ಮೊದಲಿಗೆ ಪೊಲೀಸರು ನೋಟೀಸನ್ನು ಕೊಟ್ಟರು, ನಂತರ ನಾನು ಮತ್ತು ಪ್ರಾಸಾ.3 ರವರು ಪ್ರಾಸಾ.1 ರವರ ಮನೆಗೆ ಆರೋಪಿಯ ಬಟ್ಟೆಗಳನ್ನು ತೆಗೆದುಕೊಂಡು ಠಾಣೆಗೆ ಪುನಃ ಬಂದೆವು.

ಪ್ರಶ್ನೆಃ ನೀವು ಮನೆಗೆ ಹೋದಾಗ ಸಮಯ ಎಷ್ಟಾಗಿತ್ತು?

ಉತ್ತರಃ ಸಂಜೆ 5.15 ಗಂಟೆಯಿಂದ 5.30.

ಪ್ರಶ್ನೆಃ ಬಟ್ಟೆ ತೆಗೆದುಕೊಂಡು ಬನ್ನಿ ಎಂದು ನಿಮಗೆ ಯಾರು ಹೇಳಿದ್ದರು, ಅವರ ಹೆಸರೇನು?

ಉತ್ತರಃ ಪೊಲೀಸರು ಹೇಳಿದ್ದರು. ಅವರ ಹೆಸರು ನನಗೆ ಗೊತ್ತಿಲ್ಲ.

ಪ್ರಶ್ನೆಃ ಬಟ್ಟೆಯನ್ನು ತೆಗೆದುಕೊಂಡು ಠಾಣೆಗೆ ಹೋದಾಗ ಪೊಲೀಸರು ನಿಮ್ಮ ಸಮಕ್ಷಮ ಕೂಡಲೇ ಬರವಣಿಗೆ ಮಾಡಿಕೊಂಡರೆ?

ಉತ್ತರಃ ತಕ್ಷಣ ಮಾಡಿಕೊಂಡಿಲ್ಲ. ಆದರೆ ಆರೋಪಿ ಹಾಕಿದ್ದ ಬಟ್ಟೆಯನ್ನು ತೆಗೆದು ಕೊಟ್ಟ ಬಳಿಕ ಪ್ಯಾಕಿಂಗ್ ಮಾಡಿ ಬರವಣಿಗೆ ಮಾಡಿಕೊಂಡರು.

ಪ್ರಶ್ನೆಃ ಶರ್ಟಿನ ಯಾವ ಭಾಗದಲ್ಲಿ ರಕ್ತದ ಕಲೆಗಳು ಇದ್ದವು?

ಉತ್ತರಃ ನಾನು ಗಮನಿಸಲಿಲ್ಲ.

ಪ್ರಶ್ನೆಃ ರಕ್ತದ ಕಲೆಗಳು ಹಸಿ ರಕ್ತದ ಕಲೆಗಳಾಗಿದ್ದವೇ ಅಥವಾ ಒಣಗಿದ್ದವೇ?

ಉತ್ತರಃ ಒಣಗಿತ್ತು.

ಪ್ರಶ್ನೆಃ ಸಾಮಾನ್ಯವಾಗಿ ರಕ್ತದ ಕಲೆಗಳಿದ್ದ ಬಟ್ಟೆಗಳನ್ನು ಒಗೆದರೆ ರಕ್ತದ ಕಲೆಗಳು ಹೋಗುತ್ತವೆ?

ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ ನಿಮಗೆ ಬಟ್ಟೆ ತರುವಂತೆ ಪೊಲೀಸರು ಹೇಳಿದ ಬಗ್ಗೆ ಮತ್ತು ನೀವು ಅವುಗಳನ್ನು ತಂದು ಕೊಟ್ಟ ಬಗ್ಗೆ ಪೊಲೀಸರು ಬರವಣಿಗೆ ಮಾಡಿದ್ದಾರೆಯೇ ?

ಉತ್ತರಃ ಹೌದು.

ಪ್ರಶ್ನೆಃ ಠಾಣೆಯಲ್ಲಿ ಪೊಲೀಸರು ಒಟ್ಟು ಎಷ್ಟು ಸಹಿಗಳನ್ನು ಪಡೆದುಕೊಂಡರು?

ಉತ್ತರಃ ಶರ್ಟು ಮತ್ತು ಪ್ಯಾಂಟುಗಳ ಮೇಲೆ ಅಂಟಿಸಿದ ಚೀಟಿಗಳಲ್ಲಿ ಸಹಿ ಪಡೆದುಕೊಂಡರು. ಒಟ್ಟು 3 ರಿಂದ 4 ಸಹಿಗಳನ್ನು ಪಡೆದರು.

ಪ್ರಶ್ನೆಃ ಶರ್ಟು ಯಾವ ಭಾಗದಲ್ಲಾದರು ಹರಿದಿತ್ತೇ?

ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ ಪ್ಯಾಂಟ್ ಮೇಲೆ ರಕ್ತದ ಕಲೆಗಳು ಇದ್ದವೇ?

ಉತ್ತರಃ ನನಗೆ ಗೊತ್ತಿಲ್ಲ.

ಪ್ರಶ್ನೆಃ ಪೊಲೀಸ್ ಠಾಣೆಯಲ್ಲಿ ಎಷ್ಟು ಗಂಟೆಯವರೆಗೆ ಇದ್ದೀರಿ?

ಉತ್ತರಃ ಸಂಜೆ 6 ಗಂಟೆಯವರೆಗೆ.

ಪ್ರಶ್ನೆಃ ಸಂಜೆ 6 ಗಂಟೆಯ ನಂತರ ಸೀದಾ ಮನೆಗೆ ಹೋದಿರೆ?

ಉತ್ತರಃ ಪೊಲೀಸರು ಜೀಪಿನಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಹೋದರು. ನಾವು ಬೈಕಿನಲ್ಲಿ ಅಲ್ಲಿಗೆ ಹೋದೆವು.

ಪ್ರಶ್ನೆಃ ಸ್ಥಳಕ್ಕೆ ನೀವು ಮೊದಲು ಹೋಗಿದ್ದೀರಾ ?

ಉತ್ತರಃ ಒಟ್ಟಿಗೆ ಹೊರಟು, ಒಟ್ಟಿಗೆ ಹೋದೆವು.

ಪ್ರಶ್ನೆಃ ಅಲ್ಲಿಗೆ ಹೋದಾಗ ಸಾರ್ವಜನಿಕರು ಇದ್ದರೇ?

ಉತ್ತರಃ ಇಲ್ಲ.

ಪ್ರಶ್ನೆಃ ಅಕ್ಕಪಕ್ಕದ ಅಂಗಡಿ, ಮನೆಯವರು ಇದ್ದರೇ ?

ಉತ್ತರಃ ಆ ಸಮಯಕ್ಕೆ ಯಾರು ಬಂದಿರಲಿಲ್ಲ.

ಪ್ರಶ್ನೆಃ ಬಾಳೆಹೊನ್ನೂರು ಪೊಲೀಸ್ ಠಾಣೆಯಿಂದ ಅಲ್ಲಿಗೆ ಎಷ್ಟು ದೂರವಾಗುತ್ತದೆ?

ಉತ್ತರಃ 3 ಕಿ.ಮೀ.

ಪ್ರಶ್ನೆಃ ಸ್ಥಳಕ್ಕೆ ಹೋದಾಗ ಎಷ್ಟು ಗಂಟೆಯಾಗಿತ್ತು, ಅಲ್ಲಿ ಎಷ್ಟು ಗಂಟೆಯವರೆಗೆ ಇದ್ದೀರಿ?

ಉತ್ತರಃ ಹೋದಾಗ ಸಂಜೆ 6.15 ಗಂಟೆಯಾಗಿತ್ತು. ಸಂಜೆ 7.15 ಗಂಟೆಯವರೆಗೆ ನಾವು ಅಲ್ಲಿದ್ದೆವು.

ಪ್ರಶ್ನೆಃ ಅಲ್ಲಿ ನೀವು ಪೊಲೀಸರಿಗೆ ಹೇಳಿ ಒಕ್ಕಣೆ ಕೊಟ್ಟು ಬರೆಸಿದ್ದೀರಾ ?

ಉತ್ತರಃ ಇಲ್ಲ

ಪ್ರಶ್ನೆಃ ಅಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡರೆ?

ಉತ್ತರಃ ಫೋಟೋ ತೆಗೆದುಕೊಂಡರು. ಆರೋಪಿ ಕೃತ್ಯ ನಡೆದ ಸ್ಥಳವನ್ನು

ತೋರಿಸಿದನು, ಅಲ್ಲಿ ಪೊಲೀಸರು ಫೋಟೋ ತೆಗೆದುಕೊಂಡರು ಮತ್ತು ಸಹಿ ಪಡೆದುಕೊಂಡರು.

ಪ್ರಶ್ನೆಃ ನೀವು ಮೇಲೆ ಹೇಳಿದ್ದನ್ನು ಹೊರತುಪಡಿಸಿ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿ ಸಹಿ ತೆಗೆದುಕೊಂಡರೆ ?

ಉತ್ತರಃ ಇಲ್ಲ.

ಪ್ರಶ್ನೆಃ ನೀವು ಮದುಗುಣಿ ಗ್ರಾಮದ ಮುಖಂಡರಾಗಿ ಅಥವಾ ಪಂಚಾಯ್ತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದೀರಾ?

ಉತ್ತರಃ ಇಲ್ಲ.

23. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 2 ರಲ್ಲಿ, ಈಗ್ಗೆ 2 ವರೆ ವರ್ಷಗಳ ಹಿಂದೆ ಒಂದು ದಿನ ನಾನು ನಮ್ಮ ಮನೆಯಲ್ಲಿದ್ದೆನು, ಆಗ ಸಂಜೆ ಹೊತ್ತಿಗೆ ರವಿರವರನ್ನು ಆರೋಪಿ ಗುದ್ದಲಿಯಿಂದ ಹೊಡೆದು ಕೊಲೆ ಮಾಡಿದ ವಿಚಾರ ತಿಳಿಯಿತು, ವಿಷಯ ತಿಳಿದ ಕೂಡಲೇ ನಾನು ರವಿರವರ ಮನೆಯ ಹತ್ತಿರ ಹೋದೆನು, ಅವರ ಮನೆಯ ಮುಂದೆ ರಸ್ತೆ ಪಕ್ಕದಲ್ಲಿ ರವಿರವರು ಬಿದ್ದಿದ್ದು, ಅವರ ಮುಖ, ತಲೆ ಮತ್ತು ಕುತ್ತಿಗೆಯ ಹತ್ತಿರ ಕಡಿದ ಗಾಯವಾಗಿ ರಕ್ತ ಬರುತ್ತಿತ್ತು, ನಾನು ನೋಡಿದಾಗ ಆರೋಪಿ ಪ್ರಾಸಾ.1 ರವರ ಮನೆಯ ಮುಂದೆ ತನ್ನ ಕೈಯಲ್ಲಿ ಗುದ್ದಲಿಯನ್ನು ಹಿಡಿದುಕೊಂಡು ನಿಂತಿದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 3 ರಲ್ಲಿ, ನಂತರ ರವಿರವರನ್ನು ಆಂಬ್ಯುಲೇನ್ಸಿನಲ್ಲಿ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಾನು ಕೂಡ ಸದರಿ ಆಸ್ಪತ್ರೆಗೆ ಹೋದೆನು, ಅಲ್ಲಿ ನಾನು ಪ್ರಾಸಾ.1 ರವರನ್ನು ಏನಾಯಿತು ಎಂದು ಕೇಳಿದಾಗ,

ಆರೋಪಿ ಆಗ್ಗೆ ಸುಮಾರು ದಿನಗಳಿಂದ ಅವರ ಮನೆಯಲ್ಲೇ ಉಳಿದುಕೊಂಡಿದ್ದಾಗಿ, ರವಿರವರು ಆತನನ್ನು ಕುರಿತು ಮನೆ ಬಿಟ್ಟು ಹೋಗು ಎಂದು ಹೇಳಿದರೂ ಸಹ ಆತ ಹೋಗದೇ ಅಲ್ಲೇ ಇದ್ದುದ್ದಾಗಿ, ಆ ದಿನ ಮಧ್ಯಾಹ್ನ 3.30 ಗಂಟೆ ಸುಮಾರಿಗೆ ರವಿರವರು ಕೆಲಸ ಮುಗಿಸಿ ಮನೆಗೆ ಬಂದಾಗ ಆರೋಪಿ ಅವರ ಮನೆಯಲ್ಲೇ ಇದ್ದುದ್ದನ್ನು ಕಂಡು ಇನ್ನೂ ಯಾಕೆ ಮನೆ ಬಿಟ್ಟು ಹೋಗಿಲ್ಲ ಎಂದು ಕೇಳಿದ್ದಾಗ ಆರೋಪಿ ಅವರೊಂದಿಗೆ ಜಗಳ ಮಾಡಿ ಗುದ್ದಲಿಯಿಂದ ಆತನ ಮೇಲೆ ಹಲ್ಲೆ ಮಾಡಿದ್ದಾಗಿ ತಿಳಿಸಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

25. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 4 ರಲ್ಲಿ, ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ರವಿರವರಿಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದರಿಂದ ನಾನು, ಫ್ರಾಸಾ.1 ಮತ್ತು ಅವರ ಮಗನಾದ ಫ್ರಾಸಾ.2 ರವರು ರವಿರವರನ್ನು ಅದೇ ದಿನ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ಅಲ್ಲಿ ಅದೇ ದಿನ ರಾತ್ರಿ ರವಿರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

26. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 5 ರಲ್ಲಿ, ನಂತರ ಬಾಳೆಹೊನ್ನೂರು ಪೊಲೀಸರು ವೆನಲಾಕ್ ಆಸ್ಪತ್ರೆಯ ಶವಗಾರಕ್ಕೆ ಬಂದು ಅಲ್ಲಿ ಇರಿಸಿದ್ದ ರವಿರವರ ಶವವನ್ನು ಪರಿಶೀಲಿಸಿದರು, ಆ ಸಮಯದಲ್ಲಿ ನಾನು ಹಾಜರಿದ್ದೆನು, ಅಲ್ಲಿ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.9

ರಿಂದ ಪಿ.17 ಫೋಟೋಗಳಲ್ಲಿ ರವಿರವರ ಶವ ಮತ್ತು ಅವರಿಗೆ ಆದ ಗಾಯಗಳು ಕಂಡುಬರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

27. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 6 ರಲ್ಲಿ, ರವಿರವರು ಮೃತಪಟ್ಟ ಮಾರನೆ ದಿನ ಪೊಲೀಸರು ಆರೋಪಿ ರವಿರವರ ಮೇಲೆ ಹಲ್ಲೆ ಮಾಡಿದ್ದ ಸ್ಥಳಕ್ಕೆ ಬಂದರು, ಆ ಸಮಯದಲ್ಲಿ ನಾನು, ಫ್ರಾಸಾ.1 ಮತ್ತು ಚಾಸಾ.8 ಅರುಣ್ ವೇಗಸ್ ರವರು ಅಲ್ಲಿ ಹಾಜರಿದ್ದೆವು, ಸ್ಥಳದಲ್ಲಿ ಮಹಜರನ್ನು ಜರುಗಿಸಲು ಸಹಕರಿಸುವಂತೆ ಪೊಲೀಸರು ನನಗೆ ಮತ್ತು ಚಾಸಾ.8 ರವರಿಗೆ ನಿಪಿ.29 ರಂತೆ ನೋಟೀಸನ್ನು ಕೊಟ್ಟರು, ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.1 ರವರು ಆರೋಪಿ ಕೃತ್ಯ ಎಸಗಿದ್ದ ಸ್ಥಳವನ್ನು ಪೊಲೀಸರಿಗೆ ತೋರಿಸಿದರು, ಆ ಸಮಯದಲ್ಲಿ ಪೊಲೀಸರು ಕೃತ್ಯ ನಡೆದ ಸ್ಥಳದಲ್ಲಿ ಟಾರ್ ರಸ್ತೆಯ ಮೇಲೆ ಇದ್ದ ರಕ್ತದ ಕಲೆಗಳನ್ನು ಕೆರೆದು ಸಂಗ್ರಹಿಸಿಕೊಂಡರು ಮತ್ತು ಸ್ಥಳದಲ್ಲಿದ್ದ ಒಂದು ಗುದ್ದಲಿಯನ್ನು ಫ್ರಾಸಾ.1 ರವರು ಪೊಲೀಸರಿಗೆ ಹಾಜರುಪಡಿಸಿ ಅದರಿಂದ ಆರೋಪಿ ತನ್ನ ಗಂಡನ ಮೇಲೆ ಹಲ್ಲೆ ಮಾಡಿದ್ದಾಗಿ ತಿಳಿಸಿದ್ದು, ಅದನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ಮು.ಮಾ.1 ಮತ್ತು 2 ನ್ನು ಅಮಾನತುಪಡಿಸಿಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ನಿಪಿ.2 ರಂತೆ ಮಹಜರನ್ನು ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ಬರೆದುಕೊಂಡರು, ಅದಕ್ಕೆ ನಾನು, ಫ್ರಾಸಾ.1 ಮತ್ತು ಚಾಸಾ.8 ರವರು ಸಹಿ ಮಾಡಿದೆವು, ಮಹಜರ್ ಸಮಯದಲ್ಲಿ ಪೊಲೀಸರು ನಿಪಿ.3 ರಿಂದ ಪಿ.8 ಮತ್ತು ಪಿ.31 ರಂತೆ ಫೋಟೋಗಳನ್ನು ತೆಗೆದುಕೊಂಡರು, ಅವುಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ

ಅವುಗಳನ್ನು ಪೊಲೀಸರು ಮೇಲೆ ಹೇಳಿದಂತೆ ಘಟನಾ ಸ್ಥಳದಲ್ಲಿ ಮಹಜರ್ ಜರುಗಿಸುವ ಸಮಯದಲ್ಲಿ ತೆಗೆದಿದ್ದಾಗಿ ಅವುಗಳಲ್ಲಿ ನಿಮ್ಮ, ಪ್ರಾಸಾ.1, ಚಾಸಾ.8 ಮತ್ತು ಪೊಲೀಸರ ಇರುವಿಕೆ ಕಂಡುಬರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

28. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 7 ರಲ್ಲಿ, ಆದಾದ ಒಂದು ವಾರದ ಬಳಿಕ ಪೊಲೀಸರು ನನಗೆ ಮತ್ತು ಪ್ರಾಸಾ.3 ರವರಿಗೆ ನಿಪಿ.20 ರಂತೆ ನೋಟೀಸನ್ನು ಕೊಟ್ಟು ಮಹಜರ್ ಜರುಗಿಸಲು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಬರುವಂತೆ ಕರೆದಿದ್ದರು, ಪೊಲೀಸರು ನೋಟೀಸನ್ನು ಕೊಟ್ಟ ಮೇರೆಗೆ ನಾನು ಮತ್ತು ಪ್ರಾಸಾ.3 ರವರು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಿದ್ದೆವು, ಅಲ್ಲಿ ಆರೋಪಿ ಪೊಲೀಸರ ವಶದಲ್ಲಿದ್ದನು, ಆರೋಪಿ ಆ ಸಮಯದಲ್ಲಿ ತಾನು ಧರಿಸಿದ್ದ ಒಂದು ತುಂಬು ತೋಳಿನ ಬಿಳಿ, ನೀಲಿ, ಹಸಿರು ಬಣ್ಣಗಳ ಮಿಶ್ರಿತ ಚೆಕ್ಸ ಶರ್ಟು ಮತ್ತು ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ತಾನು ಕೃತ್ಯವಸೆಗಿದ್ದ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದನು, ಅವುಗಳ ಮೇಲೆ ರಕ್ತದ ಕಲೆಗಳಾಗಿದ್ದವು, ಆರೋಪಿಯ ಬಟ್ಟೆಗಳು ಪ್ರಾಸಾ.1 ರವರ ಮನೆಯಲ್ಲಿ ಇದ್ದ ಕಾರಣ ಪೊಲೀಸರು ಪ್ರಾಸಾ.1 ರವರ ಮನೆಯಿಂದ ಆತನಿಗೆ ತೊಡಲು ಬೇರೆ ಬಟ್ಟೆಗಳನ್ನು ತರಿಸಿ ಅವುಗಳನ್ನು ಆರೋಪಿಗೆ ಕೊಟ್ಟರು, ಆರೋಪಿ ತಾನು ಮೇಲೆ ಹೇಳಿದಂತೆ ಧರಿಸಿದ್ದ ಶರ್ಟು ಮತ್ತು ಪ್ಯಾಂಟನ್ನು ಬದಲಿಸಿ ಅವುಗಳನ್ನು ನಮ್ಮ ಸಮಕ್ಷಮ ಪೊಲೀಸರಿಗೆ ಹಾಜರು ಪಡಿಸಿದರು, ಅವುಗಳನ್ನು ಪೊಲೀಸರು ಒಂದು ಕವರಿನಲ್ಲಿ ಹಾಕಿ ಅವುಗಳ ಮೇಲೆ ನಮ್ಮ ಸಹಿಗಳನ್ನು ಪಡೆದುಕೊಂಡು ತಮ್ಮ ವಶಕ್ಕೆ ತೆಗೆದುಕೊಂಡರು, ಆ ಬಗ್ಗೆ ಪೊಲೀಸರು ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ನಿಪಿ.21 ರಂತೆ ಮಹಜರನ್ನು ಬರೆದುಕೊಂಡರು, ಸದರಿ

ಮಹಜರಿಗೆ ನಾನು ಮತ್ತು ಪ್ರಾಸಾ.3 ರವರು ಸಹಿ ಮಾಡಿದೆವು ಮತ್ತು ಆರೋಪಿ ಸಹ ಅದಕ್ಕೆ ಸಹಿ ಮಾಡಿದನು, ಆ ಸಮಯದಲ್ಲಿ ಪೊಲೀಸರು ನಿಪಿ.22 ಮತ್ತು ಪಿ.23 ರಂತೆ ಫೋಟೋಗಳನ್ನು ತೆಗೆದುಕೊಂಡರು, ಅವುಗಳಲ್ಲಿ ನನ್ನ, ಪ್ರಾಸಾ.3, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮು.ಮಾ.3 ಮತ್ತು 4 ಬಟ್ಟೆಗಳನ್ನು ಆರೋಪಿ ಹಾಜರುಪಡಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

29. ನಿಮ್ಮ ಮುಖ್ಯ ವಿಚಾರಣೆಯ ಖಂಡಿಕೆ 9 ರಲ್ಲಿ, ಅದೇ ದಿನ ಮೇಲೆ ಹೇಳಿದಂತೆ ಆರೋಪಿಯ ಬಟ್ಟೆಗಳನ್ನು ಪೊಲೀಸರು ಅಮಾನತು ಪಡಿಸಿಕೊಂಡ ಬಳಿಕ ಆರೋಪಿ ನನ್ನನ್ನು, ಪ್ರಾಸಾ.3 ಮತ್ತು ಪೊಲೀಸರನ್ನು ಪ್ರಾಸಾ.1 ರವರ ಮನೆಯ ಮುಂಭಾಗದಲ್ಲಿರುವ ಎನ್.ಆರ್.ಪುರದಿಂದ ಬಾಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಕೃತ್ಯ ನಡೆದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತಾನು ರವಿರವರಿಗೆ ಗುದ್ದಲಿಯಿಂದ ಹೊಡೆದು ಕೊಲೆ ಮಾಡಿದೆನು ಎಂದು ತಿಳಿಸಿ ಜಾಗವನ್ನು ತೋರಿಸಿದನು, ಅಲ್ಲಿ ಪೊಲೀಸರು ಸಂಜೆ 6 ಗಂಟೆಯಿಂದ 7 ಗಂಟೆಯವರೆಗೆ ನಿಪಿ.24 ರಂತೆ ಮಹಜರ್ ಬರೆದುಕೊಂಡರು ಮತ್ತು ನಿಪಿ.25 ರಿಂದ ಪಿ.28 ರಂತೆ ಫೋಟೋಗಳನ್ನು ತೆಗೆದುಕೊಂಡರು, ಸದರಿ ಮಹಜರಿಗೆ ನಾನು, ಪ್ರಾಸಾ.3 ಮತ್ತು ಆರೋಪಿ ಸಹಿ ಮಾಡಿದೆವು, ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಪ್ರಾಸಾ.3, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

30. ನೀವು ಮತ್ತು ಪ್ರಾಸಾ.2 ರವರು ಆತ್ಮೀಯ ಸ್ನೇಹಿತರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಚಿಕ್ಕಂದಿನಿಂದ ಒಟ್ಟಿಗೆ ಓದಿದ್ದೇವೆ, ಆದರೆ ಈಗ ನಾನು ನನ್ನ ಕೆಲಸದಲ್ಲಿ ಬಿಜಿ ಆಗಿದ್ದೇನೆ, ನಾವಿಬ್ಬರು ಕೇವಲ ಕಾಂಟ್ಯಾಕ್ಟನಲ್ಲಿದ್ದೇವೆ ಮತ್ತು ಆ ದಿನ ನಾನು ಮನೆಯಲ್ಲಿದ್ದ ಕಾರಣ ಫ್ರಾಸಾ.2 ರವರು ಕರೆ ಮಾಡಿದ್ದರಿಂದ ಹೋಗಿದ್ದೇನೆ, ಬೇರೆ ಕಡೆ ಇದ್ದಿದ್ದರೆ ಹೋಗಲು ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.